CeG
ಇ-ಆಡಳಿತ ಕೇಂದ್ರ
ಕರ್ನಾಟಕ ಸಂಘ ಸಂಸ್ಥೆಗಳ ನೊಂದಾಯಿತ ಅಧಿನಿಯಮ 1960ರ ಪ್ರಕಾರ ನೊಂದಾಯಿತ ಸಂಸ್ಥೆ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ-ಆಡಳಿತ)
ಕೊಠಡಿ ಸಂಖ್ಯೆ: 12, ನೆಲ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು – 560001

ಕರ್ನಾಟಕ ಸರ್ಕಾರ

ಪತ್ರ ಸಂಖ್ಯೆ: CeG-NAD0ADMN/1/2021 ದಿನಾಂಕ: 11-10-2021

ಇವರಿಗೆ,
ಶ್ರೀ. ಜಿ. ಜಗದೀಶ, ಭಾ.ಆ.ಸೇ,
ಆಯುಕ್ತರು,
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾಸೌಧ, ಭಗವಾನ್ ಮಹಾವೀರ ರಸ್ತೆ (ಇನ್ ಫೆಂಟ್ರಿ ರಸ್ತೆ)
ಬೆಂಗಳೂರು - 560 001.

ಮಾನ್ಯರೇ,

ವಿಷಯ: ಮಾಹಿತಿ ಕಣಜ ಯೋಜನೆಯ ಪತ್ರಿಕಾಗೋಷ್ಠಿ ಆಯೋಜಿಸಿರುವ ಕುರಿತು.

*****

ಮಾಹಿತಿ ಹಕ್ಕು ಕಾಯ್ದೆಯ ವಿಧಿ ೪(೨) ರ ಹೇಳಿಕೆಯಂತೆ, ಕರ್ನಾಟಕ ಸರ್ಕಾರವು ರೂಪಿಸಿದ ಅಂತರಜಾಲ ಮಾಹಿತಿ ಪ್ರಕಟಣೆಯಿಂದ, ಕರ್ನಾಟಕ ರಾಜ್ಯ ಮತ್ತು ಅದರ ಜನತೆಗಾಗಿ ನಾಗರಿಕರ ನಿಧಿಯನ್ನು ಹೇಗೆ ಬಳಸಲಾಗುತ್ತಿದೆ ಎಂಬ ಬಗ್ಗೆ ತಿಳಿಯುವ ಅಧಿಕಾರವನ್ನು ಒದಗಿಸುವ ಏಕಗವಾಕ್ಷಿ ಮತ್ತು ಏಕೀಕೃತ ವೆಬ್ ಪೋರ್ಟಲ್ ಆಗಿ ಹೊರಹೊಮ್ಮಿದೆ. ಮಾಹಿತಿ ಕಣಜ ಪೋರ್ಟಲ್ ಅನ್ನು ಬಳಸಲು ನಾಗರಿಕರಿಗೆ ಯಾವುದೇ ಲಾಗ್ ಇನ್ ಅವಶ್ಯವಿರುವುದಿಲ್ಲ ಮತ್ತು ಈ ಪೋರ್ಟಲ್ ನ ಮೂಲಕ ವ್ಯಾಪಕ ಶ್ರೇಣಿಯ ಮಾಹಿತಿಯನ್ನು ನಾಗರಿಕರು ಸುಲಭವಾಗಿ ಪಡೆಯಬಹುದಾಗಿರುತ್ತದೆ.

2005 ರಿಂದ ಪ್ರತಿ ವರ್ಷವು ಅಕ್ಟೋಬರ್ 12 ರಂದು, "ಮಾಹಿತಿ ಹಕ್ಕು ದಿನ" ಎಂದು ದೇಶವ್ಯಾಪಿ, ಆಚರಿಸಲಾಗುತ್ತದೆ. ಕರ್ನಾಟಕ ಸರ್ಕಾರವು ನೂತನ ಮತ್ತು ಸುಧಾರಿತ ಮಾಹಿತಿ ಕಣಜ ಪೋರ್ಟಲ್ ಅನ್ನು ಪ್ರಾರಂಭಿಸುವ ಮೂಲಕ ಆಡಳಿತದಲ್ಲಿ ಪಾರದರ್ಶಕತೆಯನ್ನು ಬಲಪಡಿಸುವ ತನ್ನ ದೃಢವಾದ ಬದ್ಧತೆಯನ್ನು ಪ್ರದರ್ಶಿಸಲು ಬಯಸುತ್ತದೆ. ಮಾಹಿತಿ ಕಣಜ ತಂತ್ರಾಂಶವು ರಾಜ್ಯ ಸರ್ಕಾರದ ಡಿಜಿಟಲ್ ತಂತ್ರಜ್ಞಾನವನ್ನು ನಿಯೋಜಿಸಲಾಗುವ ಬದ್ಧತೆಯ ಇನ್ನೊಂದು ಉದಾಹರಣೆಯಾಗಿದ್ದು, ನಾಗರಿಕರಿಗೆ ಮೂಲಭೂತ ಸೇವೆಗಳು ಹಾಗೂ ಅದರ ಮಾಹಿತಿಯನ್ನು ಸುಲಭವಾಗಿ ಪಡೆಯಲು ಅನುವು ಮಾಡಿಕೊಡುತ್ತದೆ.

ಮುಂದುವರೆದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ: 12-10-2021 ರಂದು ಉನ್ನತೀಕರಿಸಲಾದ ಮಾಹಿತಿ ಕಣಜ ಪೋರ್ಟಲ್ ಅನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿ.ಆ.ಸು.ಇ (ಇ-ಆಡಳಿತ) ಅವರಿಂದ ಪತ್ರಿಕಾಗೋಷ್ಠಿಯನ್ನು ಅಯೋಜಿಸಲಾಗಿದೆ. ಪತ್ರಿಕಾಗೋಷ್ಠಿಯನ್ನು ಕೊಠಡಿ ಸಂಖ್ಯೆ: 104, ಮೂದಲನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು, ರಲ್ಲಿ ಮಧ್ಯಾಹ್ನ 04:00 ಗಂಟೆ ಸಮಯಕ್ಕೆ ಹಮ್ಮಿಕೊಳ್ಳಲಾಗಿದೆ. ಸದರಿ ಅಯೋಜಿಸಲಾದ ಪತ್ರಿಕಾಗೋಷ್ಠಿಗೆ ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮದ ಪ್ರತಿನಿಧಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿ ರಾಜ್ಯದ ನಾಗರಿಕರಿಗೆ ಮಾಧ್ಯಮದ ಮೂಲಕ 'ಮಾಹಿತಿ ಕಣಜ' ಯೋಜನೆಯ ಹೆಚ್ಚಿನ ಪ್ರಚಾರವನ್ನು ನೀಡಬೇಕಾಗಿ ತಮ್ಮಲ್ಲಿ ಈ ಮೂಲಕ ಕೋರಲಾಗಿದೆ.

ಯೋಜನಾ ನಿರ್ದೇಶಕರು
ಡಿಜಿಲಾಕರ್, KODI, ಮಾಹಿತಿ ಕಣಜ & NAD
ಸಿ.ಆ.ಸು.ಇ (ಇ-ಆಡಳಿತ) ಇಲಾಖೆ

ಪ್ರತಿ:

೧. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಶಾಖೆ, ಸಿ.ಆ.ಸು.ಇ (ಇ-ಆಡಳಿತ)
೨. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಆಪ್ತ ಶಾಖೆ, ಸಿ.ಆ.ಸು.ಇ (ಇ-ಆಡಳಿತ)
೩. ಜಂಟಿ ನಿರ್ದೇಶಕರು, (ಸುದ್ದಿ ಮತ್ತು ಪತ್ರಿಕಾ ಶಾಖೆ), ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ.

080-22258339 / 22258338 / 22258336
pdmk@karnataka.gov.in, pdnad@karnataka.gov.in, pd-kodi@karnataka.gov.in
pddigilocker@karnataka.gov.in